ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**




# ಬಾಯಾರಿದ ಕಬ್ಬೂರಿಗೆ ನೀರು ನೀಡಿದ ಜಲ ಜೀವನ ಮಿಷನ್

ಗಾಮೀಣ ಭಾರತದ ಪ್ರತಿ ಗ್ರಾಮಗಳಿಗೆ ಶುದ್ಧ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸಬೇಕೆಂಬ ಧ್ಯೇಯೋದ್ದೇಶದಿಂದ ಆರಂಭಗೊಂಡ ಯೋಜನೆಯೇ ಜಲಜೀವನ್ ಮಿಷನ್. ಶುದ್ಧ ಕುಡಿಯುವ ನೀರಿನ ಅಭಾವ ಎದುರಿಸುತ್ತಿರುವ ಗ್ರಾಮದ ಪ್ರತಿಯೊಬ್ಬರ ಜನರ ಮನೆಯಲ್ಲೂ ಜಲ ಜೀವನ್ ಮಿಷನ್ ಹೊಸ ಬೆಳಕು ಮೂಡಿಸಿದೆ. ಇಂತಹ ಗ್ರಾಮಗಳಲ್ಲಿ ಕಬ್ಬೂರು ಗ್ರಾಮವೂ ಒಂದಾಗಿದೆ.

ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಕಬ್ಬೂರು ಗ್ರಾಮವು ತಾಲೂಕು ಕೇಂದ್ರದಿಂದ 10 ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ 876 ಮನೆಗಳಿದ್ದು, ಒಟ್ಟು 4,072 ಜನಸಂಖ್ಯೆಯಿದೆ. ಈ ಗ್ರಾಮದಲ್ಲಿ ವಾರ್ಷಿಕ ಸರಾಸರಿ 141 ರಿಂದ 980 ಮಿಲಿ ಮೀಟರ್ ಮಳೆಯಾಗುತ್ತದೆ.

## ಮನೆ ಮನೆಗೆ ಗಂಗೆ ಯೋಜನೆ ಆರಂಭದ ಸ್ಥಿತಿ :

ಕಬ್ಬೂರು ಗ್ರಾಮವು ಅವಳಿಕಟ್ಟಿ, ಕೆಂಗೇರಿ, ಸುಮ್ಮೆಕಟ್ಟೆ, ಬಾಲಕಟ್ಟೆ ಸೇರಿದಂತೆ ಏಳು ಕೆರೆಗಳನ್ನು ಹೊಂದಿದೆ. ಆದರೆ ಈ ಕೆರೆಗಳ ನೀರು ಊರಿನ ಜನರ ದಾಹ ತೀರಿಸಲು ಸಾಕಾಗಲಿಲ್ಲ. ಇದೇ ಕಾರಣದಿಂದ ಕಬ್ಬೂರು ಗ್ರಾಮದ ಜನರು ನೀರಿನ ಬವಣೆಯಿಂದ ಹೊರ ಬರಲು ಸಾಧ್ಯವಾಗಿರಲಿಲ್ಲ. ಗ್ರಾಮದ 3 ಓಣಿಗಳು ನೀರಿಲ್ಲದೆ ಸಂಕಷ್ಟ ಎದುರಿಸುತ್ತಿದ್ದರು. ಗ್ರಾಮಸ್ಥರು 1-2 ಕಿ.ಮೀ ದೂರದಲ್ಲಿರುವ ಬೊರವೆಲ್‌ನಿಂದ ನೀರನ್ನು ಹೊತ್ತು ತರಬೇಕಿತ್ತು. ಈ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾದ ಗ್ರಾಮಸ್ಥರು ಗ್ರಾಮ ಪಂಚಾಯಿತಿಯ ಎದುರು ನೀರಿನ ಸಮಸ್ಯೆ ಪರಿಹರಿಸಲು ಗಲಾಟೆ ನಡೆಸುತ್ತಿದ್ದರು.

ಕೆಲ ವರ್ಷಗಳಿಂದ ಶುದ್ಧ ಕುಡಿಯುವ ನೀರನ್ನು ಪಡೆಯುವ ಹೋರಾಟದಲ್ಲಿ ನಿರಾಸೆಗೊಂಡಿದ್ದ ಜನರಲ್ಲಿ 2019 ರಲ್ಲಿ ಬಂದ ಜಲ ಜೀವನ್ ಮಿಷನ್ ಯೋಜನೆ ಹರುಷ ತಂದಿತು. ತಮ್ಮ ಊರಿನ ನೀರಿನ ಸಮಸ್ಯೆಗೆ ಪರಿಹಾರ ಸಿಗಬಹುದು ಎಂಬ ನಂಬಿಕೆ ಜನರಲ್ಲಿ ಮೂಡಿತು. ಜನರ ಇಷ್ಟದಂತೆ ಮನೆ ಮನೆಗೆ ಗಂಗೆಯನ್ನು ಹರಿಸಲು ರಾಜ್ಯ ಸರ್ಕಾರ ಮುಂದಾದಾಗ ಹಲವಾರು ಸಮಸ್ಯೆಗಳು, ಸವಾಲುಗಳು ಎದುರಾದವು.

ಯೋಜನೆಯ ಉದ್ದೇಶವನ್ನು ಜನರಿಗೆ ಅರ್ಥ ಮಾಡಿಸಲು ಗ್ರಾಮ ಸಭೆ, ಕಿರುಚಿತ್ರ, ಪ್ರದರ್ಶನ ಇನ್ನಿತರ ಚಟುವಟಿಕೆಗಳನ್ನು ಮಾಡಲಾಯಿತು. ಏನೇ ಆದರೂ ಸರಿ ಮೂಲ ಭೂತ ಅವಶ್ಯತೆಯಾದ ನೀರನ್ನು ಪಡೆದುಕೊಳ್ಳಬೇಕು ಎಂಬ ಛಲ ಗ್ರಾಮಸ್ಥರಲ್ಲೂ ಇದ್ದ ಕಾರಣ ಯೋಜನೆಯನ್ನು ಬೆಂಬಲಿಸಿದರು.

ಮನೆ ಮನೆಗೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ಗೃಹ ನಳ ಸಂಪರ್ಕದ ಮೂಲಕ ನೀಡಲಾಯಿತು. ಹೀಗೆ ಗ್ರಾಮಸ್ಥರ ನೀರಿನ ಸಮಸ್ಯೆ ಬಗೆಹರಿಯಿತು. ಅಲ್ಲದೇ ಕಳೆದ 25 ವರ್ಷಗಳಿಂದ ನೀರಿನ ಸಮಸ್ಯೆ ಎದುರಿಸುತ್ತಿದ್ದ 3 ಓಣೆಗಳ ಜನರು ನಿರಾಳತೆಯನ್ನು ನೆಮ್ಮದಿಯನ್ನು ಹೊಂದಿದರು. ಬಳಿಕ ಯೋಜನೆಯ ಉಸ್ತುವಾರಿ ಮತ್ತು ನಿರ್ವಹಣೆಗಾಗಿ ಗ್ರಾಮ ಸಭೆ ಕರೆದು ಸರ್ವ ಸದಸ್ಯರ ಸಮ್ಮುಖದಲ್ಲಿ "ಹರ್ ಘರ್ ಜಲ್" ಗ್ರಾಮ ಎಂದು ಘೋಷಿಸಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗೆ ಯೋಜನೆ ನಿರ್ವಹಣೆ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಹಸ್ತಾಂತರಿಸಲಾಯಿತು.

ಬಳಿಕ ನೀರು ಗಂಟಿಗಳಿಗೆ ನಳ ಸಂಪರ್ಕ ಮತ್ತು ನಿರ್ವಹಣೆ ತರಬೇತಿ ನೀಡಲಾಯಿತು. ಈ ಯೋಜನೆಯ ಜಾರಿಗೊಳಿಸುವ ಮೊದಲು 13 ಕೊಳವೆ ಬಾವಿಗಳಿಂದ ದಿನನಿತ್ಯ ಪೂರೈಕೆ ಮಾಡಲಾಗುತ್ತಿತ್ತು. ಈಗ ಕೇವಲ 3 ಕೊಳವೆಬಾವಿಗಳಿಂದ ನೀರನ್ನು ಪೂರೈಸಲಾಗುತ್ತಿದೆ . ಇದಕ್ಕೆ ಮುಖ್ಯ ಕಾರಣ ಸರಿಯಾಗಿ ನಿರ್ವಹಣೆ ಮಾಡುತ್ತಿರುವುದು ಮತ್ತು ಜನರಲ್ಲಿ ನೀರಿನ ಮಿತ ಬಳಕೆಯ ಕುರಿತು ಜಾಗೃತಿ ಮೂಡಿಸಿರುವುದೇ ಆಗಿದೆ. ಇದರಿಂದ ನೀರಿನ ಉಳಿತಾಯ ಹಾಗೂ ವಿದ್ಯುತ್ ಬಿಲ್ ದರದಲ್ಲಿ ಕಡಿತವಾಗಿದೆ. ಪಂಚಾಯತಿಯ ಅರ್ಥಿಕ ಹೊರೆಯನ್ನು ತಗ್ಗಿಸಿದೆ.



**ಒಟ್ಟಾರೆಯಾಗಿ ಮನೆ ಮನೆಗೆ ಗಂಗೆ ಯೋಜನೆಯಿಂದ ಗ್ರಾಮದ ಪ್ರತಿಯೊಬ್ಬರು ನೆಮ್ಮದಿಂದ ಜೀವನ ನಡೆಸುತ್ತಿರುವುದಲ್ಲದೆ, ಗ್ರಾಮದ ಜನರ ಜೀವನ ಮಟ್ಟ ಸುಧಾರಿಸಿದೆ. ಕಬ್ಬೂರಿನ ಜನತೆಯ ಬಾಯಾರಿಕೆಯನ್ನು ಜಲ ಜೀವನ್ ಮಿಷನ್ ನೀಗಿಸಿದೆ.**

